ಇಂಥ ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ. ಮತ್ತೆ ಪತ್ತೆ ಹಚ್ಚಿದ ಎಲ್ಲಾ ಪ್ರಕರಣಗಳ ಬಗ್ಗೆಯೂ ವಿಚಾರಣೆಗೆ ಗುರಿಪಡಿಸಿ ಸೂಕ್ತ ಕಾರ್ಯಕ್ರಮವನ್ನು ಇಲಾಖೆ ತೆಗೆದುಕೊಂಡಿದೆ ಎಂದು ತಿಳಿಸುತ್ತೇನೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಸುಳ್ಳು ಜಾತಿ ಸರ್ಟಿಫಿಕೇಟ್ ಪಡೆದುಕೊಂಡು ಕೆಲಸಕ್ಕೆ ಸೇರಿರತಕ್ಕಂಥ ಸಾವಿರಾರು ಜನರು ಇದ್ದಾರೆ. ಅವರನ್ನು ಪತ್ತೆ ಹಚ್ಚಿ ಮನೆಗೆ ಕಳುಹಿಸಿದರೆ ಅವರ ಗತಿ ಏನು? ಬೋಗಸ್ ಸರ್ಟಿಫಿಕೇಟ್ ತೆಗೆದುಕೊಂಡು ಕೆಲಸಕ್ಕೆ ಸೇರಿರತಕ್ಕಂಥ ಸುಮಾರು ೮೫೦ ಜನರು ಇದ್ದಾರೆ. ಆದ್ದರಿಂದ ಶಾಶ್ವತವಾಗಿ ಪಾಸ್‌ಬುಕ್ ಕೊಡತಕ್ಕಂಥ ವ್ಯವಸ್ಥೆ ಏನಾದರೂ ಸರ್ಕಾರದವರು ಮಾಡುತ್ತಾರೆಯೇ?

ಶ್ರೀ ಬಿ. ಬಸವಣ್ಣಪ್ಪ.—ಶಾಶ್ವತವಾಗಿ ಕೊಡತಕ್ಕ ವ್ಯವಸ್ಥೆ ಮಾಡುತ್ತೇವೆ. ಒಂದು ಸಾರಿ ಕ್ಯಾಸ್ಟ್ ಸರ್ಟಿಫಿಕೇಟ್ ಇಷ್ಯೂ ಮಾಡಿದ ಮೇಲೆ ಮುಗಿಯಿತು. ಮತ್ತೆ ಬೇಕಾದರೆ ಅದನ್ನು ಟೂ ಕಾಪಿ ಮಾಡಿಸಿಕೊಳ್ಳಬೇಕು. ಆದ್ದರಿಂದ ಈ ಗೊಂದಲವನ್ನು ಬಗೆಹರಿಸುತ್ತೇವೆ.

ಸಂಡೂರಿನಲ್ಲಿ ಪದವಿ ಪೂರ್ವ ವಿದ್ಯಾರ್ಥಿ ನಿಲಯ

೧೪೬೮. (೫) ಶ್ರೀ ಯು. ಭೂಪತಿ (ಸಂಡೂರು).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸಂಡೂರಿನಲ್ಲಿ ಸರ್ಕಾರಿ ವಿದ್ಯಾರ್ಥಿ ನಿಲಯ ಸೌಲಭ್ಯವಿಲ್ಲದೆ ವಿದ್ಯಾರ್ಥಿಗಳಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಈ ಶೈಕ್ಷಣಿಕ ಸಾಲಿನಲ್ಲಿ ಸಂಡೂರಿನಲ್ಲಿ ಪದವಿ ಪೂರ್ವ ವಿದ್ಯಾರ್ಥಿನಿಲಯ (ಹಿಂದುಳಿದ ವರ್ಗ ಪಂಗಡಗಳು) ಪ್ರಾರಂಭಿಸಲಾಗುವುದೇ ?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಯು. ಭೂಪತಿ.—ಈ ಪ್ರಶ್ನೆಯನ್ನು ನಾನು ಈ ಸದನದಲ್ಲಿ ಒನೇ ಸಾರಿ ಕೇಳುತ್ತಿದ್ದೇನೆ. ಮಾನ್ಯ ಸಚಿವರು ಮೊದಲನೇ ಸಾರಿ ಸರ್ಕಾರದ ಗಮನಕ್ಕೆ ಬಂದಿದೆ. ೨ನೇ ಸಾರಿ ದೊಡ್ಡ ಭಾಷಣ ಮಾಡಿ ತಾಲ್ಲೂಕಿಗೆ ಒಂದು ಹಾಸ್ಟೆಲ್ ಕೊಡುತ್ತೇವೆ, ಅದಕ್ಕೆ ಜಿಲ್ಲಾಧಿಕಾರಿಗಳಿಂದ ಸೂಚನೆ ಬಂದರೆ ಪಂಜೂರಾತಿ ಬಗ್ಗೆ ಪರಿಶೀಲಿಸುತ್ತೇವೆ. ೩ನೇ ಸಾರಿ ಸರ್ಕಾರದ ಗಮನಕ್ಕೆ ಬಂದಿಲ್ಲ. ಪ್ರಶ್ನೆ ಉದ್ಭವಿಸುವುದಿಲ್ಲವೆಂದು ಹೇಳಿದ್ದಾರೆ. ೪ನೇ ಸಾರಿ ಏನಾಗಬಹುದೆಂಬುದನ್ನು ಊಹಿಸಬೇಕಂ. ಇದರ ತೀವ್ರತೆಯನ್ನು ಸಚಿವರು ಅರ್ಥ ಮಾಡಿಕೊಳ್ಳಬೇಕು. ನಾನು ಕೂಡ ಹಾಸ್ಟೆಲಿನಲ್ಲಿ ಓದಿದವನೆ. ಸಂಡೂರು ಕಾಲೇಜು ಹುಡುಗರಿಗೆ ಖಾಸಗಿ ಹಾಸ್ಟೆಲು ಇತ್ತು. ಅಲ್ಲಿ ತಿಂಗಳಿಗೆ ೨೦–೩೦ ರೂಪಾಯಿ ಮಾತ್ರ ತೆಗೆದುಕೊಳ್ಳುತ್ತಿದ್ದರಂ ಅಲ್ಲಿ ಜೂನಿಯರ್ ಕಾಲೇಜು ಫಸ್ಟ್ ಗ್ರೇಡ್ ಕಾಲೇಜು ಇದೆ. ನಂದಿಹಳ್ಳಿಯಲ್ಲಿ ಪಿ. ಜೆ. ಸೆಂಟರ್ ಇದೆ. ಆದರೆ ಅಲ್ಲಿ ಎಲ್ಲಿಯೂ ಖಾಸಗಿ ಹಾಸ್ಟೆಲು ಇಲ್ಲದೆ ಬಡ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ. ಈ ಬಗ್ಗೆ ಪರಿಶೀಲಿಸಿಕೊಂಡು ೫೦ ಸೀಟು ಇರತಕ್ಕ ಬಿ.ಸಿ.ಎಂ. ಹಾಸ್ಟೆಲನ್ನು ಮಂಜೂರಾ ಮಾಡಬೇಕೆಂದು ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಜಿ. ಬಸವಣ್ಣಪ್ಪ.—ತಮ್ಮ ಪ್ರಶ್ನೆಯಲ್ಲಿ ಸಂಡೂರಿನಲ್ಲಿ ವಿದ್ಯಾರ್ಥಿ ನಿಲಯದ ಸೌಲಭ್ಯ ಇಲ್ಲವೆಂದು ಹೇಳಿದ್ದೀರಿ. ಅಲ್ಲಿ ಒಂದು ಹಾಸ್ಟೆಲು ಇದೆ. ಆದರಲ್ಲಿ ೫೦ ವಿದ್ಯಾರ್ಥಿಗಳಿಗೆ ಅನುಕೂಲವಾಗತಕ್ಕ ಅವಕಾಶ ಇದೆ. ಅದಕ್ಕೋಸ್ಕರ ಮೊದಲ ಪ್ರಶ್ನೆಗೆ ಇಲ್ಲ ಎಂದು ಹೇಳಿದೆ. ೧೯೮೬–೮೭ರಲ್ಲಿ ಎಸ್. ಸಿ./ಎಸ್. ಟಿ. ಮಂತ್ರು ಬಿ. ಸಿ. ಎಂ. ಹಾಸ್ಟೆಲುಗಳನ್ನು ತೆರೆಯಲು ಬಡ್ಜೆಟ್ ಪ್ರಾವಿಷನ್ ಇರಲಿಲ್ಲ. ಈ ವರ್ಷ ಬೇಡಿಕೆ ಪಾಸ್ ಮಾಡುವಾಗ ವಿಚಾರ ಮಾಡೋಣ.

ಶ್ರೀ ಯು. ಭೂಪತಿ.—ನಾನು ಕಾಲೇಜು ವಿದ್ಯಾರ್ಥಿಗಳಿಗೆ ಹಾಸ್ಟೆಲು ಒದಗಿಸಿಕೊಡಬೇಕೆಂದು ಕೇಳಿದ್ದೇನೆ. ಪ್ರಶ್ನೆಯನ್ನು ಇಲಾಖೆಯಲ್ಲಿ ಏಕೆ ಹೀಗೆ ಮಾಡುತ್ತಾರೋ ಗೊತ್ತಿಲ್ಲ. ಅನೇಕ

ಪ್ರಶ್ನೆಗಳು ಬದಲಾಗಿ ಬರುತ್ತಿವೆ. ಕೆಲವನ್ನು ಡಿಲೀಟ್ ಮಾಡಂತ್ತಾರೆ. ಇಂಥ ಸಮಸ್ಯೆಯಾಗಿದೆ. ಅಲ್ಲಿ ಪ್ರಿಮೆಟ್ರಿಕ್ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಇದೆ. ಪೋಸ್ಟ್ ಮೆಟ್ರಿಕ್ ವಿದ್ಯಾರ್ಥಿಗಳಿಗೆ ಹಾಸ್ಟೆಲು ಇಲ್ಲ. ಈ ವರ್ಷವಾದರೂ ಅದಕ್ಕೆ ಒಪ್ಪಿಗೆ ಕೊಡಬೇಕು. ಪ್ರತಿ ವರ್ಷ ಕೇಳುತ್ತಾ ಹೋದರೆ ತಮಗೆ ಭೂಷಣವಲ್ಲ.

ಶ್ರೀ ಜಿ. ಬಸವಣ್ಣಪ್ಪ.——ಪ್ರಶ್ನೆಯಲ್ಲಿ ಕಾಲೇಜು ವಿದ್ಯಾರ್ಥಿ ನಿಲಯಂ ಇಲ್ಲವೆಂದು ಇಲ್ಲ. ಸರ್ಕಾರೀ ವಿದ್ಯಾರ್ಥಿ ನಿಲಯ ಇಲ್ಲವೆಂದು ಇರುವುದರಿಂದ ಅದಕ್ಕೆ ಉತ್ತರಿಸಲಾಗಿದೆ. ಕಾಲೇಜು ವಿದ್ಯಾರ್ಥಿ ನಿಲಯದ ಬಗ್ಗೆ ಪರಿಶೀಲನೆ ಮಾಡುತ್ತೇನೆ.

ಬಿಜಾಪುರ ಜಿಲ್ಲೆಯ ಸೋಮನ ಕೊಪ್ಪ ಗ್ರಾಮದಲ್ಲಿ ಕಲ್ಯಾಣ ಮಂಟಪದ ನಿರ್ಮಾಣ

೧೩೪೬. ಶ್ರೀ ಗೋಪಾಲ ಮುಕುಂದ ಕಾನಡೆ (ಸಿರ್ಸಿ).——ಮಾನ್ಯ ಕಂದಾಯ, ಯೋಜನೆ ಹಾಗೂ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬಿಜಾಪುರ ಜಿಲ್ಲೆಯ ಬಾದಾಮಿ ತಾಲ್ಲೂಕಿನ ಸೋಮನ ಕೊಪ್ಪ ಗ್ರಾಮಕ್ಕೆ ಕಲ್ಯಾಣ ಮಂಟಪ ಕಟ್ಟಲು ಮಜರಾಯಿ ಇಲಾಖೆಯಿಂದ ಹಣ ಮಂಜೂರು ಮಾಡಲಾಗಿರುವುದು ನಿಜವಲ್ಲವೆ ? ಹಾಗಿದ್ದಲ್ಲಿ, ಎಷ್ಟು ಹಣ ಮಂಜೂರು ಮಾಡಲಾಗಿದೆ ಮತ್ತು ಯಾವಾಗ ಮಂಜೂರು ಮಾಡಲಾಗಿದೆ ?

ಆ) ಸದರಿ ಕಟ್ಟಡವು ಅರ್ಧಕ್ಕೆ ನಿಂತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಸದರಿ ಕಟ್ಟಡವನ್ನು ನಿರ್ಮಿಸುತ್ತಿರುವವರು ಯಾರು ಮತ್ತು ಅವರು ಸರ್ಕಾರದ ಪರವಾನಿಗೆ ಹೊಂದಿರುವರೇ ?

ಈ) ಸದರಿ ಕಟ್ಟಡಕ್ಕೆ ಮಂಜೂರಾದ ಹಣವು ಪೋಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಉ) ಹಾಗಿದ್ದಲ್ಲಿ, ಇದಕ್ಕೆ ಸಂಬಂಧಿಸಿದವರ ಮೇಲೆ ಸರ್ಕಾರದವರು ಕ್ರಮಕ್ಕೈಗೊಳ್ಳುವರೇ ?

ಊ) ಸದರಿ ಕಟ್ಟಡವನ್ನು ಯಾವಾಗ ಪೂರ್ಣ ಗೊಳಿಸಲಾಗುವುದು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಯೋಜನೆ ಹಾಗೂ ಕಾರ್ಮಿಕ ಮಂತ್ರಿಗಳು).—

ಅ) ಬಿಜಾಪುರ ಜಿಲ್ಲೆಯ ಪೂರ್ಣಾನಂದ ಮಠದ ವತಿಯಿಂದ ಕಲ್ಯಾಣ ಮಂಟಪ ಕಟ್ಟಲು ಮಜರಾಯಿ ಇಲಾಖೆಯಿಂದ ೫೦,೦೦೦–೦೦ ರೂಪಾಯಿಗಳನ್ನು ಮಂಜೂರು ಮಾಡಿರುವುದು ನಿಜ ಈ ಅನುದಾನವನ್ನು ದಿನಾಂಕ. ೨೫-೩–೧೯೮೨ ರಂದು ಮಂಜೂರು ಮಾಡಲಾಗಿದೆ.

ಆ) ಹೌದು.

ಇ) ಸದರಿ ಮಠದ ಮಠಾಧಿಪತಿಯಾದ ಶ್ರೀ ಶ್ರದ್ಧಾನಂದ ಸ್ವಾಮಿಗಳು ಈ ಕಲ್ಯಾಣ ಮಂಟಪ ಕಟ್ಟಿಸುತ್ತಿದ್ದಾರೆ. ಸ್ವಾಮಿಗಳು ಈ ಮಠದ ಒಬ್ಬರೇ ಟ್ರಸ್ಟಿಗಳಾಗಿದ್ದು, ಈ ಕಟ್ಟಡ ಕಟ್ಟಿಸಲು ಅಧಿಕಾರ ಹೊಂದಿರುತ್ತಾರೆ.

ಈ) ಇಲ್ಲ.

ಉ) ಉದ್ಭವಿಸುವುದಿಲ್ಲ.

ಊ) ಮಠಾಧಿಪತಿಗಳು ಕಟ್ಟಡ ಪೂರ್ಣ ಮಾಡಲು ಬೇಕಾಗಿರುವ ಬಾಕಿ ಹಣವನ್ನು ಶೇಖರಣೆ ಆದಾಗ ಪೂರ್ಣ ಮಾಡುವರು.

ಶ್ರೀ ಜೆ.ಎಂ. ಕಾವಡೆ.–ಕಟ್ಟಡ ಕಟ್ಟಿರುವ ನೆಪದಲ್ಲಿ ಯಾರ್ಯಾರು ಏನೇನು ಮಾಡಿದರೋ ಗೊತ್ತಿಲ್ಲ. ಒಟ್ಟಿನಲ್ಲಿ ಸ್ವಾಮೀಜಿಯಂನ್ನು ಊರಂ ಬಿಡಿಸಿದ್ದಾರೆ. ರಾವಣ್ಣ ಬೆಲ್ಲದ್, ಊದಿನಕಡ್ಡಿ. (ನಿವೃತ್ತ ಶಿಕ್ಷಕ). ಚಂದ್ರುಪ್ಪ ಮತ್ತು ಹನುಮೇಗೌಡ ಎಂಬುವವರು ಕಂಟ್ರಾಕ್ಟ್ ಮಾಡಿ ಕೆಲಸ ಮಾಡುತ್ತಿದ್ದಾರೆ. ೫೦ ಸಾವಿರ ರೂಪಾಯಿ ಕೊಟ್ಟಿದ್ದಕ್ಕೆ ಕೇಳುವವರು ಇಲ್ಲ. ಪ್ರತಿಯೊಂದು ಮನೆಯಿಂದ ೫೦೦–೧೦೦೦